# 1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

## ಎಸ್.ಸಿ –435/2022

| ಸಾಕ್ಷಿದಾರರ ಹೆಸರು | : | ನಟರಾಜು | ಫ್ರಾಸಾ: | 2 |
|---|---|---|---|---|
| ತಂದೆ ಹೆಸರು | : | ನಂಜೇಗೌಡ | ಚಾಸಾ: | 3 |
| ವಯಸ್ಸು | : | 43 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ:13.10.2025 | |
| ವೃತ್ತಿ | : | ಸ್ಕೂಟರ್ ಮ್ಯಾಕನಿಕ್ | | |
| ವಾಸ ಸ್ಥಳ | : | ಹೊಸ ಮುದಲಾಪುರ | | |

**ಮುಖ್ಯ ವಿಚಾರಣೆ: ಸರಕಾರಿ ಅಭಿಯೋಜಕರವರಿಂದ**:

1. ಆರೋಪಿ ನನ್ನ ಮೊದಲನೆ ಹೆಂಡತಿ. ಚಾಸಾ–2 ನನ್ನ ಎರಡನೇ ಹೆಂಡತಿ. ನನ್ನ ಮೊದಲನೆ ಹೆಂಡತಿಗೆ ಒಂದು ಗಂಡು ಮತ್ತು ಹೆಣ್ಣು ಮಕ್ಕಳಿರುತ್ತಾರೆ. 2 ನೇ ಹೆಂಡತಿಗೆ ಒಂದು ಹೆಣ್ಣು ಮಗು ಇದ್ದು, ಒಂದು ವಾರದ ಹಿಂದೆ ಜನನವಾಗಿರುತ್ತದೆ. ನಾನು ಚಾಸಾ 2 ರವರನ್ನು ಮದುವೆಯಾಗಿರುವ ವಿಚಾರ ಆರೋಪಿಗೂ ಗೊತ್ತು. ಚಾಸಾ–2 ರವರಿಗೆ ಆಸ್ತಿ ಕೊಟ್ಟಿರುವ ವಿಚಾರವು ಸಹ ಆರೋಪಿಗೆ ಗೊತ್ತು. ಆರೋಪಿಗೂ 1 ಎಕರೆ ಜಮೀನನ್ನು ಕೊಟ್ಟಿದ್ದೇನೆ. ಇನ್ನು ಮುಂದೆಯೂ ಕೂಡ ಕೊಡಬೇಕು ಎಂಬುದಾಗಿ ತಿರ್ಮಾನಿದ್ದೇನೆ.

2. ಎರಡು ಕುಟುಂಬದ ನಡುವೆ ನಾನು 2 ನೇ ಮದುವೆಯಾಗಿರುವ ವಿಚಾರದಲ್ಲಿಯಾಗಲೀ, ಅವರಿಗೆ ಕೊಡುವ ಆಸ್ತಿ ವಿಚಾರದಲ್ಲಿಯಾಗಲೀ ಯಾವುದೇ ಜಗಳವಾಗಿರುವುದಿಲ್ಲ, ಅ ಬಗ್ಗೆ ಯಾವುದೇ ಪಿರ್ಯಾದು ನೀಡಿರುವುದಿಲ್ಲ.

3. 2 ನೇ ಹೆಂಡತಿಯನ್ನು ಬಿಟ್ಟು ಬಿಡುವ ಬಗ್ಗೆ ನಾನಾಗಲೀ, ಆರೋಪಿಯಾಗಲೀ ವಿಷ ಕುಡಿದು ಆತ್ಮಹತ್ಯೆ ಮಾಡಿಕೊಳ್ಳುವ ಚಿಂತನೆಯನ್ನು

ಮಾಡಿರುವುದಿಲ್ಲ. ನಾನು ಆರೋಪಿ ಮತ್ತು ಚಾಸಾ–2 ರ ನಡುವೆ ಒಟ್ಟಾಗಿ ಇರುತ್ತಿದ್ದೆನು. ಚಾಸಾ–2 ರವರನ್ನು ಮದುವೆಯಾದ ಮೇಲೆ ಬೆಂಗಳೂರಿನಲ್ಲಿ ಒಂದು ಬಾಡಿಗೆ ಮನೆಯಲ್ಲಿ 2 ತಿಂಗಳ ಕಾಲ ಇರಿಸಿದ್ದೆನು. ನಂತರ 2ನೇ ಹೆಂಡತಿಯ ಕೆಲಸದ ಪ್ರಯುಕ್ತ ನಾನು ಮೈಸೂರಿನ ಹೂಟಗಳ್ಳಿಯಲ್ಲಿ ಬಾಡಿಗೆ ಮನೆ ಮಾಡಿದ್ದೆನು.

4. ಈಗಿರುವಾಗ ಸುಮಾರು 3 ವರ್ಷದ ಹಿಂದೆ ಒಂದು ದಿನ ಸಂಜೆ 8.30 ಗಂಟೆ ಸಮಯದಲ್ಲಿ ಕೆ.ಆರ್ ಆಸ್ಪತ್ರೆಯಿಂದ ನನಗೆ ಒಂದು ಫೋನ್ ಕರೆ ಬಂದಿರುತ್ತದೆ. ಅ ಪ್ರಕಾರ ನಾನು ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ–2 ರವರಿಗೆ ಕುತ್ತಿಗೆಯ ಹಿಂಬಾಗದಲ್ಲಿ ಕೂಯ್ದಿರುವ ಗಾಯ ಕಂಡು ಬಂದಿರುತ್ತದೆ. ಈ ಗಾಯವು ಆಕೆಗೆ ಉಂಟಾಗ ಬಗ್ಗೆ ಆಕೆಯಿಂದ ನನಗೆ ಯಾವುದೇ ವಿಷಯ ತಿಳಿದು ಬಂದಿಲ್ಲ. ಆರೋಪಿಯಿಂದ ಚಾಸಾ–2 ರವರ ಮೇಲೆ ಕೊಲೆ ಪ್ರಯತ್ನ ಆಗಿದೆ ಎಂದು ನನಗೆ ತಿಳಿದು ಬಂದಿರುವುದಿಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಯಾವುದೇ ಹೇಳಿಕೆಯನ್ನು ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಃ ಸರ್ಕಾರಿ ಅಭಿಯೋಜಕರವರಿಂದ ಃ**

5. ದಿಃ02.02.2022 ರಂದು "ಈಗಿರುವಾಗ್ಗೆ ಕಳೆದ 3–4 ವರ್ಷಗಳ ಹಿಂದೆ ನಮ್ಮೂರಿನ ------- ಸ್ವೀಕೃತಿಯ ನಕಲನ್ನು ಹಾಜರುಪಡಿಸಿರುತ್ತೇನೆ" ಎಂಬುದಾಗಿ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು **ನಿಪಿ.4** ಎಂದು ಗುರುತಿಸಲಾಯಿತು.

6. ನಾನು ಚಾಸಾ–2 ರವರನ್ನು 2 ನೇ ಮದುವೆಯಾಗಿ ಆಸ್ತಿ ಮತ್ತು ಸಂಸಾರ ಹಾಳಾಯಿತು ಎನ್ನುವ ವಿಚಾರದಲ್ಲಿ ದ್ವೇಷವಿಟ್ಟುಕೊಂಡು ಆರೋಪಿಯು ಚಾಸಾ –2 ರವರ ಮೇಲೆ ಮಾರಣಾಂತಿಕ ಹಲ್ಲೆ ಮಾಡಿರುವ ವಿಚಾರ ಗೊತ್ತಿದ್ದರೂ, ಆರೋಪಿಯು ನನಗೆ ಮೊದಲನೆ ಹೆಂಡತಿಯಾಗಿರುವುದರಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ ಃ</u>

ಇಲ್ಲ ಎಂದು ಹೇಳುತ್ತಾರೆ.

<u>ಮರುವಿಚಾರಣೆ ಃ ಇಲ್ಲ</u>

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮೈಸೂರು